ಖಾರವಾದ ನುಡಿಗಳಿಂದ. ಡಬಲ್ಸ್ ವಿಭಾಗಕ್ಕೆ ಗೌರವ ಸಿಗುತ್ತಿಲ್ಲ ಮತ್ತು ಟಾಪ್ ಯೋಜನೆಯಲ್ಲಿ ತಮ್ಮನ್ನೂ ಸೇರ್ಪಡೆ ಮಾಡಬೇಕು ಎಂದು ಜ್ವಾಲಾ ಗುಟ್ಟಾ ಒಂದು ವರ್ಷದ ಹಿಂದೆ ಹೇಳಿಕೆ ನೀಡಿದ್ದು ಚರ್ಚೆಗೆ ಗ್ರಾಸವಾಗಿತ್ತು. ನಂತರ ಅವರಿಗೆ ನೆರವು ಲಭಿಸಿತ್ತು.

ಕರ್ನಾಟಕದ 26 ವರ್ಷದ ಅಶ್ವಿನಿ ಪೊನ್ನಪ್ಪ ಮತ್ತು ಹೈದರಾಬಾದಿನ 32 ವರ್ಷದ ಜ್ವಾಲಾ ಅವರ ಜೋಡಿಗೆ ಗೆ ಈ ಒಲಿಂಪಿಕ್ಸ್ ಸತ್ವಪರೀಕ್ಷೆಯ ವೇದಿಕೆಯೂ ಹೌದು.

## ಬಾಕ್ಸಿಂಗ್ ರಿಂಗ್ ಖಾಲಿ ಖಾಲಿ

ಹೋದ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಮೇರಿ ಕೋಮ್ ಸೇರಿದಂತೆ ಭಾರತದ ಮಹಿಳಾ ಬಾಕ್ಸರ್‌ಗಳು ಅರ್ಹತೆ ಪಡೆದಿಲ್ಲ. ಮಾಜಿ ವಿಶ್ವ ಚಾಂಪಿಯನ್ ಮೇರಿ ಕೋಮ್, ಮಣಿಪುರದ ಎಲ್. ಸರಿತಾದೇವಿ ಅವರು ಅರ್ಹತಾ ಸುತ್ತಿನಲ್ಲಿ ಸೋತಿದ್ದು ಭಾರತದ ಬಾಕ್ಸಿಂಗ್ ಕ್ರೀಡೆಗೆ ನಷ್ಟವಾಯಿತು.

ಪುರುಷರ ವಿಭಾಗದಲ್ಲಿಯೂ ಶಿವ ಥಾಪಾ (ಬಾಂಥಮ್ ವೇಟ್), ಮನೋಜ್ ಕುಮಾರ್ (ಲೈಟ್ ವೆಲ್ಟರ್‌ವೇಟ್), ವಿಕಾಸ್ ಕ್ರಿಶನ್ ಯಾದವ್ ಕಣಕ್ಕೆ ಇಳಿಯಲಿದ್ದಾರೆ. ಇವರ ಮೇಲೆಯೇ ಈಗ ಭರವಸೆ ಇದೆ. 2008ರ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದಿದ್ದ ವಿಜೇಂದರ್ ಸಿಂಗ್ ವೃತ್ತಿಪರ ಬಾಕ್ಸಿಂಗ್‌ನಲ್ಲಿ ಮಿಂಚುತ್ತಿದ್ದಾರೆ. ಅವರು ರಿಯೊಗೆ ಅರ್ಹತೆ ಗಳಿಸುವ ಅವಕಾಶವಿದ್ದರೂ ಟೂರ್ನಿಯಲ್ಲಿ ಭಾಗವಹಿಸಲಿಲ್ಲ.

ಇನ್ನುಳಿದಂತೆ ಈಜು ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಸಾಜನ್ ಪ್ರಕಾಶ್, ಮಹಿಳೆಯರ 200 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಶಿವಾನಿ ಕಟಾರಿಯಾ, ಜುಡೊದಲ್ಲಿ ಅವತಾರ್ ಸಿಂಗ್ (50ಕೆಜಿ), ಇದೇ ಮೊದಲ ಬಾರಿಗೆ ಅರ್ಹತೆ ಗಿಟ್ಟಿಸಿರುವ ಭಾರತದ ರೋಯಿಂಗ್ ಪಟು ದತ್ತು ಬಬ್ಬನ್ ಬೋಕನಾಳ್, ವೇಟ್‌ಲಿಫ್ಟಿಂಗ್‌ನಲ್ಲಿ ಸತೀಶ್ ಶಿವಲಿಂಗಂ (ಪುರುಷರ 77ಕೆಜಿ), ಸಾಯಿಕೋಮ್ ಮಿರಾಬಾಯಿ ಚಾನು (48 ಕೆಜಿ ವಿಭಾಗ) ಟೇಬಲ್ ಟೆನಿಸ್‌ನಲ್ಲಿ ಅಚಂತಾ ಶರತ್ ಕಮಲ್, ಸೌಮ್ಯಜೀತ್ ಘೋಷ್, ಮಣಿಕಾ ಬಾತ್ರಾ ಮತ್ತು ಮೌಮಾ ದಾಸ್ ತಮ್ಮ ಸಾಮರ್ಥ್ಯವನ್ನು ಪಣಕ್ಕೊಡ್ಡಲಿದ್ದಾರೆ. ಅವರ ಅದೃಷ್ಟ ಖುಲಾಯಿಸಿದರೆ ಭಾರತದ ಕೀರ್ತಿ ಕಿರೀಟಕ್ಕೆ ಮತ್ತಷ್ಟು ಮೆರಗು ಬರುವುದು ಖಚಿತ.

2020ರ ಟೋಕಿಯೊ ಒಲಿಂಪಿಕ್ಸ್‌ಗೆ ಲಗ್ಗೆ ಹಾಕಲು ಸ್ಫೂರ್ತಿಯ ಸೆಲೆಯಾಗುವುದು ಖಚಿತ.

## ಲಿಯಾಂಡರ್ ಪೇಸ್ ಎಂಬ ಗಟ್ಟಿಗ

ಭಾರತದ ಟೆನಿಸ್ ಲೋಕವು 1996ರ ಅಟ್ಲಾಂಟಾ ಒಲಿಂಪಿಕ್ಸ್‌ನ ಆ ದಿನವನ್ನು ಎಂದಿಗೂ ಮರೆಯಲು ಸಾಧ್ಯವೇ ಇಲ್ಲ. ದೇಶದ ಟೆನಿಸ್‌ಗೆ ಮೊದಲ

| ಲಂಡನ್ ಒಲಿಂಪಿಕ್ಸ್ ಪದಕ ವಿಜೇತ ಭಾರತೀಯರು | | |
|---|---|---|
| ವಿಜಯ ಕುಮಾರ್ | ಶೂಟಿಂಗ್ 25 ಮೀ ರ್‍ಯಾಪಿಡ್‌ಫೈರ್ ಪಿಸ್ತೂಲ್ | ಬೆಳ್ಳಿ |
| ಸುಶೀಲ್ ಕುಮಾರ್ | ಕುಸ್ತಿ, 66 ಕೆಜಿ | ಬೆಳ್ಳಿ |
| ಗಗನ್ ನಾರಂಗ್ | ಶೂಟಿಂಗ್ 10 ಮೀ ಏರ್ ರೈಫಲ್ | ಕಂಚು |
| ಸೈನಾ ನೆಹ್ವಾಲ್ | ಬ್ಯಾಡ್ಮಿಂಟನ್ ಸಿಂಗಲ್ಸ್ | ಕಂಚು |
| ಮೇರಿ ಕೋಮ್ | ಬಾಕ್ಸಿಂಗ್, ಫ್ಲೈವೇಟ್ | ಕಂಚು |
| ಯೋಗೇಶ್ವರ್ ದತ್ | ಕುಸ್ತಿ, 60 ಕೆಜಿ ಫ್ರೀಸ್ಟೈಲ್ | ಕಂಚು |

ಒಲಿಂಪಿಕ್ಸ್ ಪದಕ ಒಲಿದಿತ್ತು. ಅದೂ ಪುರುಷರ ಸಿಂಗಲ್ಸ್‌ನಲ್ಲಿ. ಅಂದು ಲಿಯಾಂಡರ್ ಪೇಸ್ ಕಂಚಿನ ಪದಕದ ಕಾಣಿಕೆಯನ್ನು ದೇಶಕ್ಕೆ ನೀಡಿದ್ದರು. 1952ರ ಹೆಲ್ಸಿಂಕಿ ಒಲಿಂಪಿಕ್ಸ್‌ನಲ್ಲಿ ಕಶಾಬಾ ಜಾಧವ್ ಅವರು ಕುಸ್ತಿಯಲ್ಲಿ ಕಂಚು ಗೆದ್ದ ನಂತರ ವೈಯಕ್ತಿಕ ವಿಭಾಗದಲ್ಲಿ ಭಾರತಕ್ಕೆ ಪದಕ ತಂದ ಖ್ಯಾತಿ ಪೇಸ್ ಅವರದ್ದು. ಆದರೆ ಈಗ ಅವರು ಡಬಲ್ಸ್ ಮಾತ್ರ ಆಡುತ್ತಿದ್ದಾರೆ.

ಇತ್ತೀಚೆಗಷ್ಟೆ ಮುಕ್ತಾಯವಾದ ಡೇವಿಸ್ ಕಪ್‌ನಲ್ಲಿ ರೋಹನ್ ಬೋಪಣ್ಣ ಅವರೊಂದಿಗೆ ಡಬಲ್ಸ್ ಪಂದ್ಯ ಗೆದ್ದರು. ಅವರ ಸಾರಥ್ಯದ ತಂಡವು ಕೊರಿಯಾ ಎದುರು ಗೆದ್ದು ಪ್ಲೇಆಫ್‌ಗೆ ಅರ್ಹತೆ ಗಳಿಸಿತು. ಇದೀಗ ರಿಯೊ ಒಲಿಂಪಿಕ್ಸ್‌ನಲ್ಲಿ ಕನ್ನಡಿಗ ರೋಹನ್ ಬೋಪಣ್ಣ ಅವರೊಂದಿಗೆ ಡಬಲ್ಸ್‌ನಲ್ಲಿ ಆಡಲಿದ್ದಾರೆ. ಬೋಪಣ್ಣ ಅವರಿಗೆ ಪೇಸ್ ಬಗ್ಗೆ ಭಿನ್ನಾಭಿಪ್ರಾಯಗಳು ಇರುವುದು ಈಗಾಗಲೇ ಸುದ್ದಿಯಾಗಿದೆ. ಆದರೆ, ಎಐಟಿಎ ಕಟ್ಟುನಿಟ್ಟಿನ ಸೂಚನೆಯಂತೆ ಅವರು ಪೇಸ್ ಜೊತೆಗೆ ಕಣಕ್ಕಿಳಿಯಲಿದ್ದಾರೆ. ಪೇಸ್ ಅವರ ಸುದೀರ್ಘ ಅನುಭವ ಮತ್ತು ಬೋಪಣ್ಣ ಅವರ ಚುರುಕುತನ ಆಟ ಮೇಳೈಸಿದರೆ ಪದಕ ಗೌರವ ಖಚಿತ.

## ಸಾನಿಯಾ ಸೊಬಗು

ಕಳೆದ ಎರಡು ವರ್ಷಗಳಿಂದ ಮಹಿಳೆಯರ ಟೆನಿಸ್‌ನಲ್ಲಿ ಸದಾ ಸುದ್ದಿಯಲ್ಲಿರುವ ಹೆಸರು ಸಾನಿಯಾ ಮಿರ್ಜಾ ಅವರದ್ದು. ಮಾರ್ಟಿನಾ ಹಿಂಗಿಸ್ ಜೊತೆಗೂಡಿ ಸತತ 11 ಪ್ರಶಸ್ತಿಗಳನ್ನು ಗೆದ್ದು ದಾಖಲೆ ಬರೆದಿರುವ ಅಗ್ರಶ್ರೇಯಾಂಕದ ಆಟಗಾರ್ತಿ. ಅವರು ರಿಯೊದಲ್ಲಿ ಪ್ರಾರ್ಥನಾ ತೊಂಬರೆ ಜೊತೆಗೆ ವನಿತೆಯರ ಡಬಲ್ಸ್ ಮತ್ತು ರೋಹನ್ ಬೋಪಣ್ಣ ಜೊತೆಗೂಡಿ ಮಿಕ್ಸ್ ಡಬಲ್ಸ್‌ನಲ್ಲಿ ಆಡಲಿದ್ದಾರೆ. ಅವರು ಸದ್ಯ ಇರುವ ಫಾರ್ಮ್‌ನಲ್ಲಿ ಎರಡೂ ವಿಭಾಗಗಳಲ್ಲಿ ನಾಕೌಟ್ ಹಂತಕ್ಕೆ ತಲುಪುವುದು ಕಷ್ಟವೇನಲ್ಲ. ಆದರೆ ವಿಶ್ವ ಶ್ರೇಷ್ಠ ಟೆನಿಸ್ ಜೋಡಿಗಳು ಭಾಗವಹಿಸುವ ಕೂಟದಲ್ಲಿ ಸಾಮರ್ಥ್ಯ ಮೀರಿ ಆಡುವ ಸವಾಲು ಭಾರತದ ಆಟಗಾರರ ಮುಂದಿದೆ. ಆದರೂ ಟೆನಿಸ್ ವಿಭಾಗದಲ್ಲಿ ಪದಕ ಗೆಲ್ಲುವ ಅವಕಾಶಗಳು ಸಾಕಷ್ಟಿವೆ.



ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450
